

ಐಂದ್ರಿಯಿಕ, ರಸಾತ್ಮಕ ನೆಲೆಗಳನ್ನು ಮೀರಿ ಅದರ ಆಚೆಗಿನ ಇನ್ನೂ ಎತ್ತರದ ಸಾಧ್ಯತೆಗಳನ್ನು ವಿವರಣೆ ಆಹ್ವಾನಿಸಿಕೊಳ್ಳುತ್ತಿದೆ.

ಈ ಎತ್ತರವನ್ನು ಗ್ರಹಿಸಿದ ತಕ್ಷಣ ಆತನು ಈತನು ಎಂಬ (ಆತನೀತನವಂತ) ಯಾತನೆ ನಿಂತಹಾಗೆ. ಈ ಅಭೇದ ಲಯವೆ ನಾನು-ನೀನು (ನಾನೀನ) ಎಂಬ ನುಡಿ ನುಂಗಿ; ತಾನು-ನೀನು ತಾನೆ ತಾ ಆಗಿ ಅದು ತಾನಾಗಿ ತನನನ ವು ಬಂದ ನೆಲೆಯನ್ನು ಪಡೆಯುತ್ತದೆ. ಇದು ಅರ್ಥದ ಹಂಗಿಲ್ಲದ ಮಾಂತ್ರಿಕ ಲಯ. ಸಂಗೀತದ ಸ್ವರ ಸೂಚಿಗಳಂತಿರುವ ಪದಗಳ ಮೂಲಕವೆ ಸಮಶ್ರುತಿಯನ್ನೂ ಜತಿಯನ್ನೂ ಸಂಗೀತ, ನಾದ, ಲಯಗಳ ಭಾವ ಸಾಹಚರ್ಯದಲ್ಲೇ ಕವನ ಪಡೆದುಕೊಳ್ಳುತ್ತದೆ. ಆ ಮೂಲಕ ಕವನ ಕಿನ್ನರಿಯ ಪ್ರತಿಮೆಯನ್ನು ಪೋಷಿಸಿ ಕೊನೆಯ ಭಾಗದ ಐಂದ್ರಿಕವಾದ ಭಾವಾರ್ಥ ಸ್ಫೋಟದತ್ತ ಸಾಗುತ್ತದೆ.

ತಾನಾಗಿ ತನನನ ಬಂದ ಕ್ರಮವನ್ನು ಭಾಷಾ ಶರೀರದಲ್ಲಿ ಕಟ್ಟಿಕೊಡುವ ನಾದಲಯವೂ ವಿಶಿಷ್ಟವಾಗಿದೆ. 'ರಂಗೊಂದು ದಂಗೊಂದು ಗುಂಗೊಂದು ಒಂದಕ್ಕೊಂದು' ಹತ್ತಾಗಿ ಜತ್ತಾಗಿ (ಜತೆಯಾಗಿ) ಸುಳಿದ ಭಾವ. ಶಾರೀರಿಕವಾಗಿ ದಣಿದ ಜೀವದ ಮೇಲೆ ಜೇನಿನ ಸುರಿಮಳೆ. ಆ ಜೇನಿನ ಮಳೆಯಲ್ಲೂ ಕಿನ್ನರಿಯ ಶ್ರುತಿ ಇದೆ. ಹಾಗಾಗಿ ಅದು 'ಜೇಂಗುಟ್ಟಿ' ಹನಿಹನಿಯಾಗಿ ಇಳಿಯುತ್ತದೆ.

ಈ ಹಂತದಲ್ಲಿ ಪ್ರಕೃತಿ ಪುರುಷನಿಗೆ ಸೋಲುವ ಮಾತು ಬರುತ್ತದೆ. ಅದು ಸಾಂಖ್ಯದರ್ಶನದಿಂದ ಪಡೆದ ತಾತ್ವಿಕತೆ. ಪ್ರಕೃತಿಯು ಜಡತತ್ವವಾದರೆ ಸಾಂಖ್ಯರಲ್ಲಿ ಪುರುಷನು ಚೈತನ್ಯ. ಸ್ತ್ರೀ-ಪುರುಷರ ಸಂಯೋಗವು ಸಂತಾನ ಸೃಷ್ಟಿಗೆ ಅಗತ್ಯ. ಆದರೆ ಪ್ರಪಂಚದ ಉತ್ಪತ್ತಿಗೆ ಪ್ರಕೃತಿ ಮತ್ತು ಪುರುಷರ ಸಂಯೋಗ ಬೇಕು. ಪ್ರಕೃತಿ ಕ್ರಿಯಾಶೀಲವಾಗಿದ್ದರೂ ಜಡ; ಪುರುಷನು ಚೈತನ್ಯಮಯವಾಗಿದ್ದರೂ ನಿಷ್ಕ್ರಿಯ. ಕುರುಡ ಕುಂಟರ ಪಯಣದ ಹಾಗೆ ಇವರು ಗುರಿ ಸೇರಬೇಕು. ಆ ಪಯಣ (ಇಹ) ಸಂಸಾರ. ಗುರಿ ತಲುಪಿದ ಬಳಿಕ ಕೈವಲ್ಯ. ಬಂಧನವಿಲ್ಲದ ಪುರುಷ ಮನಸ್ಸು, ಇಂದ್ರಿಯ ಮೊದಲಾದವುಗಳಿಂದ ಬಂಧನಕ್ಕೆ ಒಳಗಾಗುತ್ತದೆ. ಸರಳವಾಗಿ ಹೇಳುವುದಾದರೆ, ಈ ಪ್ರಪಂಚದ ಉತ್ಪತ್ತಿಗೆ ಪ್ರಕೃತಿ-ಪುರುಷರ ಈ ಸಂಯೋಗ; ಆ ಮೂಲಕ ಬಂಧ ಸಹಜ ವ್ಯವಹಾರ. ಮುಂದೆ ಪರಸ್ಪರ ಬಿಡುಗಡೆಗಳೂ ಅಷ್ಟೇ ಸಹಜ.

ಆದರೆ ಪ್ರಕೃತಿ ಪುರುಷಗೆ ಸೋತು ಅನುಭವದ ಕಿವಿಮಾತು ಆಗಿ ಮಾಯಾಕಿನ್ನರಿಯ ಭಾಗವಾಗುವ ಕಾವ್ಯ ರೂಪಣ, ಭಾಷೆಯಲ್ಲಿ ಶ್ರೇಷ್ಠ ಕವಿಯೊಬ್ಬ ಮಾತ್ರ ಸಾಧಿಸಬಲ್ಲ ಪ್ರತಿಭಾ ವಿಲಾಸ. ಪ್ರಕೃತಿ ಪುರುಷರ ಪರಸ್ಪರ ಸಂಬಂಧದಿಂದ ಹುಟ್ಟುವ ಪ್ರಾಣದ ರೂಪಕ ಕ್ರಿಯೆ ಅಂಜಿ (ಹಂಜಿ). ಹಂಜಿ ಎಂದರೆ ಹಸನು